ಪ್ರಧಾನ  ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ,
ಹೊನ್ನಾಳಿ

ಸಿ.ಸಿ. ನಂ.345/2024

ಪಿರ್ಯಾದುದಾರರು ಃ	ಹೊನ್ನಾಳಿ ಪೊಲೀಸರು.

- ವಿರುದ್ಧ -

ಆರೋಪಿತರು	1. ಚಂದ್ರಪ್ಪ ಕಡೆಮನೆ ಬಿನ್ ಶಿವಪ್ಪ ಕಡೆಮನೆ, 61 ವರ್ಷ
2. ಹನುಮಗೌಡ ಬಿನ್ ಚನ್ನಪ್ಪ, 39 ವರ್ಷ,
3.ಈಶ್ವರಪ್ಪ ಬಿನ್ ದೊಡ್ಡ ತಿಮ್ಮಪ್ಪ, 63 ವರ್ಷ,
4. ಬಸವನಗೌಡ ಬಿನ್ ಮಹದೇವಪ್ಪ, 50 ವರ್ಷ,
5.ಚನ್ನಪ್ಪ ಬಿನ್ ಹನುಮಂತಪ್ಪ, 76 ವರ್ಷ,
6. ಉಮೇಶ ಬಿನ್ ರಾಮಪ್ಪ, 49 ವರ್ಷ
7. ಪ್ರಭು ಬಿನ್ ಪರಮೇಶ್ವರಪ್ಪ, 40 ವರ್ಷ
8. ಶಿವು ಬಿನ್ ಬಸಪ್ಪ, 50 ವರ್ಷ
9.ಬಸವನಗೌಡ ಬಿನ್ ಶಿವರುದ್ರಪ್ಪ
ಎಲ್ಲಾರ ವಾಸಃ ತುಗ್ಗಲಹಳ್ಳಿ ಗ್ರಾಮ
ಹೊನ್ನಾಳಿ ತಾಲ್ಲೂಕು.

ದೋಷಾರೋಪಣೆ ಃ

ಶ್ರೀ. ದೇವದಾಸ್ ಹೆಚ್., ಬಿ.ಎ., ಎಲ್‌ಎಲ್.ಬಿ. ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಹೊನ್ನಾಳಿ ಆದ ನಾನು ಮಾಡಿದ ದೋಷಾರೋಪಣೆ ಏನೆಂದರೆಃ

ದಿನಾಂಕಃ 23.03.2024 ಹಾಗೂ 24.03.2024 ರಂದು ಹೊನ್ನಾಳಿ ಪೋಲಿಸ್ ಠಾಣಾ ವ್ಯಾಪ್ತಿಯ ತುಗ್ಗಲಹಳ್ಳಿ ಗ್ರಾಮದಲ ಸಾಕ್ಷಿ.1 ರೇವಣಸಿದ್ದಪ್ಪರವರು ತಮ್ಮ ಕಲ್ಲು ಕ್ವಾರೆಯಿಂದ ಕಲ್ಲುಗಳನ್ನು ಲಾರಿ ಮೂಲಕ ಶಿಕಾರಿಪುರ ಮುಖ್ಯ ರಸ್ತೆಗೆ ಸಾಗಾಟ

ಮಾಡುವಾಗ ಆರೋಪಿತರಾದ ನೀವುಗಳು ಅಪರಾಧ ಮಾಡುವ ಉದ್ದೇಶದಿಂದ ಅಕ್ರಮವಾಗಿ ಗುಂಪು ಕಟ್ಟಿಕೊಂಡು ಬಂದಿರುತ್ತೀರಿ ಆ ಮೂಲಕ ಆರೋಪಿತರಾದ ನೀವುಗಳು ಭಾ.ದಂ.ಸಂ. ಕಲಂ.143 ಸಹವಾಚಕ 149 ರಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಮಾಡಿರುತ್ತೀರಿ.

2. ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಅಕ್ರಮಗುಂಪು ಕಟ್ಟಿಕೊಂಡು ಬಂದು ದೊಂಬಿಯನ್ನುಂಟು ಮಾಡಿರುತ್ತೀರಿ. ಆ ಮೂಲಕ ಆರೋಪಿತರಾದ ನೀವುಗಳು ಭಾ.ದಂ.ಸಂ. ಕಲಂ.147 ಸಹವಾಚಕ 149 ರಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಮಾಡಿರುತ್ತೀರಿ.

3. ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಸಾಕ್ಷಿ.1 ರವರ ಕಲ್ಲು ಕ್ವಾರೆಯ ಲಾರಿಗಳು ರಸ್ತೆಯಲ್ಲಿ ಓಡಾಡುವಾಗ ಅವುಗಳನ್ನು ಅಡ್ಡಗಟ್ಟಿ ತಡೆದು ನಿಲ್ಲಿಸಿರುತ್ತೀರಿ. ಆ ಮೂಲಕ ಆರೋಪಿತರಾದ ನೀವುಗಳು ಭಾ.ದಂ.ಸಂ. ಕಲಂ.341 ಸಹವಾಚಕ 149 ರಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಮಾಡಿರುತ್ತೀರಿ.

4. ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಸಾಕ್ಷಿ.1 ರವರ ಕ್ವಾರಿಯಲ್ಲಿ ಕೆಲಸ ಮಾಡುವ ಹುಡುಗರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ. ಆ ಮೂಲಕ ಆರೋಪಿತರಾದ ನೀವುಗಳು ಭಾ.ದಂ.ಸಂ. ಕಲಂ.504 ಸಹವಾಚಕ 149 ರಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಮಾಡಿರುತ್ತೀರಿ.

5. ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಸಾಕ್ಷಿ.1 ರವರಿಗೆ ಇಲ್ಲಿಗೆ ಬಂದರೆ ಜೀವ ತೆಗೆಯುತ್ತೇವೆ ಎಂದು ಪ್ರಾಣ

ಬೆದರಿಕೆ ಹಾಕಿರುತ್ತೀರಿ. ಆ ಮೂಲಕ ಆರೋಪಿತರಾದ ನೀವುಗಳು ಭಾ.ದಂ.ಸಂ. ಕಲಂ.506 ಸಹವಾಚಕ 149 ರಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಮಾಡಿರುತ್ತೀರಿ.

ಪ್ರಶ್ನೆ 1ಃ- ನಿಮಗೆ ಮೇಲೆ ತಿಳಿಸಿದ ಆರೋಪಣೆಯ ಎಲ್ಲಾ ಸಾರಾಂಶ ತಿಳಿಯಿತೇ?

ಉತ್ತರಃ ಆ1- ಆ2-

ಆ3- ಆ4-

ಆ5- ಆ6-

ಆ7- ಆ8-

ಆ9-

ಪ್ರಶ್ನೆ 2ಃ- ನೀವು ಸದರಿ ಆರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಬಯಸುವಿರೋ?

ಉತ್ತರಃ ಆ1- ಆ2-

ಆ3- ಆ4-

ಆ5- ಆ6-

ಆ 7-　　　　　　　　ಆ 8-

ಆ 9-

ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿತರಿಗೆ ತಿಳಿದ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ತೆರೆದ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಯಿತು.

ಸ್ಥಳ ಃ ಹೊನ್ನಾಳಿ
ದಿನಾಂಕಃ 01.09.2025.　　　　(ದೇವದಾಸ್. ಹೆಚ್ )
ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಧೀಶರು,
ಹೊನ್ನಾಳಿ